**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ.**

**ಎಸ್.ಸಿ. ನಂ:- 167/2019**

ಪ್ರಮಾಣ ವಚನ ಬೋಧಿಸಿದ ದಿನಾಂಕ:: 26.03.2021 ಪಿಡಬ್ಲ್ಯೂ : 3
ಡಬ್ಲ್ಯೂ : 3

| | | |
|---|---|---|
| ಸಾಕ್ಷಿದಾರರ ಹೆಸರು | :: | ಜಯಮ್ಮ |
| ಗಂಡನ ಹೆಸರು | :: | ಸುಬ್ಬರಾಜು |
| ವಯಸ್ಸು | :: | 45 ವರ್ಷ |
| ವೃತ್ತಿ | :: | ಗೃಹಿಣಿ |
| ವಾಸ | :: | ಲಕ್ಕೀಪುರ ಗ್ರಾಮ |

**ಮುಖ್ಯ ವಿಚಾರಣೆ:- ಅಭಿಯೋಜನೆಯ ಪರವಾಗಿ, ಸರ್ಕಾರಿ ಅಭಿಯೋಜಕರಿಂದ:-**

ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ನನಗೆ ಗೊತ್ತು. ಲಕ್ಷ್ಮಿ 2 ನೇ ಆರೋಪಿಯ ಹೆಂಡತಿ. 1 ನೇ ಆರೋಪಿಯ ಲಕ್ಷ್ಮಿಯ ಅತ್ತೆ ಮತ್ತು 2 ನೇ ಆರೋಪಿಯ ತಾಯಿ. ಚಾಸಾ 1, 2, 4 ರಿಂದ ಚಾಸಾ 6 ಗೊತ್ತು. ಚಾಸಾ 5 2 ನೇ ಆರೋಪಿಯ ಮಗಳು. ಚಾಸಾ 6, 2 ನೇ ಆರೋಪಿಯ ತಂದೆ. ಲಕ್ಷ್ಮಿ ಈಗ ಬದುಕಿಲ್ಲ. ಲಕ್ಷ್ಮಿ ಸೀಮೆಎಣ್ಣೆ ಸ್ಟೌವ್ ಸ್ಫೋಟಗೊಂಡು, ಗಾಯಗೊಂಡು ಮೃತಪಟ್ಟಿದ್ದಾಳೆ ಎಂದು ಊರಿನಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಮೈಸೂರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾಳೆ. ನನ್ನ ಮನೆ ಮತ್ತು ಮೃತ ಲಕ್ಷ್ಮಿ ಮನೆ ಸಮೀಪದಲ್ಲಿ ಇದೆ. 2 ನೇ ಆರೋಪಿ ಕೆ ಇ ಬಿ ಯಲ್ಲಿ ಕೊಪ್ಪದಲ್ಲಿ ಕೆಲಸ ಮಾಡುತ್ತಾರೆ. ಆ ಸ್ಟೌವ್ ಸ್ಫೋಟಗೊಳ್ಳುವ ಮೊದಲು ಯಾವ ಘಟನೆಯಾಗಿದೆ ಎಂದು ಗೊತ್ತಿಲ್ಲ. ಯಾವುದೇ ಚೀರಾಟ, ಕೂಗಾಟ ಶಬ್ದ ಕೇಳಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ನೀಡಿಲ್ಲ.

(ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮತ್ತು ಪಾಟೀ ಸವಾಲಿಗೆ ಅನುಮತಿಸಬೇಕೆಂದು ಮಾನ್ಯ ಅಭಿಯೋಜಕರು ಕೋರಿದ್ದು, ಅನುಮತಿಸಲಾಗಿದೆ.)

**ಪಾಟೀಸವಾಲು: ಸರ್ಕಾರಿ ಅಭಿಯೋಜಕರಿಂದ :-**

2 ನೇ ಆರೋಪಿಗೆ ಜಲನ್ ಜಗದೀಶ ಮತ್ತು ಜಲನ್ಯಾ ಜಗದೀಶ ಎನ್ನುವ ಇಬ್ಬರು ಮಕ್ಕಳು ಎಂದರೆ ಸರಿ. 2 ನೇ ಆರೋಪಿ ಚಿಕ್ಕಮಂಗಳೂರು ಜಿಲ್ಲೆ

ಕೊಪ್ಪದಲ್ಲಿ ಕೆ ಇ ಬಿ ನೌಕರನಾಗಿರುತ್ತಾನೆ ಎಂದರೆ ಸರಿ. 2 ನೇ ಆರೋಪಿ, ಆತನ ಹೆಂಡತಿ ಮಕ್ಕಳು ಸ್ವಲ್ಪ ದಿವಸ ಕೊಪ್ಪದಲ್ಲಿ ವಾಸವಿದ್ದು, ನಂತರ ಲಕ್ಷ್ಮೀಪುರ ಗ್ರಾಮಕ್ಕೆ ಬಂದರು ಎಂದರೆ ಸರಿ. 2 ನೇ ಆರೋಪಿ ಹಾಸನಕ್ಕೆ ವರ್ಗಾವಣೆ ಮಾಡಿಸಿಕೊಳ್ಳುವ ಉದ್ದೇಶದಿಂದ ಹೆಂಡತಿ ಮಕ್ಕಳನ್ನು ಊರಿಗೆ ಕರೆಸಿಕೊಂಡು ಉಳಿದುಕೊಂಡಿದ್ದ ಎಂದರೆ ಸರಿ. ಆದರೂ ಕೂಡ 2 ನೇ ಆರೋಪಿ ವರ್ಗಾವಣೆ ಕೂಡ ಮಾಡಿಸಿಕೊಳ್ಳದೆ ತನ್ನ ಹೆಂಡತಿಗೆ ಕಿರುಕುಳ ನೀಡುತ್ತಿದ್ದ ಮತ್ತು ಮಕ್ಕಳನ್ನು ನೋಡಿಕೊಳ್ಳಲು ನಿರ್ಲಕ್ಷ ಮಾಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 1-1-2018 ರಂದು ರಾತ್ರಿ 10-00 ಗಂಟೆಗೆ ಲಕ್ಷ್ಮಿ ಮತ್ತು ಆಕೆಯ ಅತ್ತೆ ಸಣ್ಣಮುದ್ದಮ್ಮ ಜಗಳ ಮಾಡಿಕೊಳ್ಳುತ್ತಿದ್ದ ಶಬ್ದ ಬಂತು ಎಂದರೆ ಸರಿಯಲ್ಲ. ಅದು ಮಾಮೂಲಿ ಜಗಳ ಎಂದು ನಾನು ಸುಮ್ಮನಿದ್ದೆ ಎಂದರೆ ಸರಿಯಲ್ಲ. ರಾತ್ರಿ 11-00 ಗಂಟೆ ಸಮಯದಲ್ಲಿ ಲಕ್ಷ್ಮಿ ಮತ್ತು ಆಕೆಯ ಇಬ್ಬರು ಮಕ್ಕಳ ಚಿರಾಟ ಶಬ್ದ ಕೇಳಿಸಿತು ಎಂದರೆ ಸರಿಯಲ್ಲ. ನಾನು ಹೋಗಿ ನೋಡಿದೆ ಎಂದರೆ ಸರಿಯಲ್ಲ. ನಾನು ಹೋಗಿ ನೋಡಿದಾಗ ಲಕ್ಷ್ಮಿ ಸೀಮೆಎಣ್ಣೆಯನ್ನು ತನ್ನ ಮೈಮೇಲೆ ಸುರಿದುಕೊಂಡು ಬೆಂಕಿ ಹತ್ತಿಸಿಕೊಂಡು ಚಿರಾಡುತ್ತಿದ್ದಳು ಎಂದರೆ ಸರಿಯಲ್ಲ. ಆಕೆಯ ಮಕ್ಕಳು ಗಾಬರಿಯಿಂದ ಅಳುತ್ತಾ ಕೂಗಾಡುತ್ತಿದ್ದಾಗ, ನಾನು ಮತ್ತು ಇತರರು ಹೋಗಿ ಸುಟ್ಟ ಗಾಯಗಳಿಂದ ಒದ್ದಾಡುತ್ತಿದ್ದ ಲಕ್ಷ್ಮಿಗೆ ಒಂದು ರಂಗ್‌ನಿಂದ ಸುತ್ತಿ ಸುಧಾರಿಸಿದೆವು ಎನ್ನುವುದು ಸರಿಯಲ್ಲ. ಲಕ್ಷ್ಮಿಯ ಮೈಮೇಲೆ ಹೊತ್ತಿ ಉರಿದು ಹೊಗೆಯಾಡುತ್ತಿದ್ದ ನೈಟಿಯನ್ನು ಆಕೆಯ ಮಗ ಜಲನ್ ಬಿಸಾಡಿದ್ದ ಎಂದರೆ ಗೊತ್ತಿಲ್ಲ. ಅನಂತರ ಜಲನ್ ಅವರ ಮಾವ ಯೋಗೇಶನಿಗೆ ಪೋನ್ ಮಾಡಿ, ಯೋಗೇಶ ಸ್ಥಳಕ್ಕೆ ಬಂದು ಲಕ್ಷ್ಮಿಯನ್ನು ನೋಡಿ ತನ್ನ ಆಟೋದಲ್ಲಿ ಆಕೆಯನ್ನು ಹೊಳೆನರಸೀಪುರ ಆಸ್ಪತ್ರೆಗೆ ಕರೆದುಕೊಂಡು ಹೋಗಿ, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಹಾಸನದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ನನಗೆ ಗೊತ್ತಿಲ್ಲ. ಹೊಸ ವರ್ಷದ ದಿನ ಮಕ್ಕಳಿಗೆ ಏನು ತಂದು ಕೊಟ್ಟಿಲ್ಲ ಎಂದು ಲಕ್ಷ್ಮಿ ತನ್ನ ಗಂಡನಿಗೆ ಪೋನ್ ಮಾಡಿದರೆ ಏನು ಪ್ರಯೋಜನ ಆಗುತ್ತಿಲ್ಲ ಎಂದು ಕೇಳಿದಾಗ, ಅಲ್ಲೇ ಇದ್ದ 1 ನೇ ಆರೋಪಿ "ನನ್ನ ಮಗ ತಂದು ಕೊಡದೆ ಊರಿನವರು ತಂದು

ಕೊಡುತ್ತಾರಾ ಎಂದು ಬಾಯಿಗೆ ಬಂದಂತೆ ಬೈದು, ಎಲ್ಲಾದರೂ ಹೋಗಿ ಸಾಯಿ ಎಂದು ಬೈದಾಗ, ಲಕ್ಷ್ಮಿಗೆ ಬೇಸರವಾಗಿ ರಾತ್ರಿ *11-00* ಗಂಟೆ ಸಮಯದಲ್ಲಿ ಬಚ್ಚಲು ಮನೆಗೆ ಹೋಗಿ ಕ್ಯಾನನಲ್ಲಿದ್ದ ಸೀಮೆಎಣ್ಣೆಯನ್ನು ಮೈಮೇಲೆ ಸುರಿದುಕೂಂಡು ಬೆಂಕಿ ಹಚ್ಚಿಕೊಂಡಲು ಎಂದು ಆಕೆಯ ಮಕ್ಕಳು ನನಗೆ ತಿಳಿಸಿದರು ಎಂದರೆ ಸರಿಯಲ್ಲ.

ನಾನು ಪೊಲೀಸರ ಸಮಕ್ಷಮ ದಿನಾಂಕ *3-1-2018* ರಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಪೊಲೀಸರ ಸಮಕ್ಷಮ - ಇವರ ಸಂಸಾರದಲ್ಲಿ ,,,,,,,,,,,,,,,,,,,,,, ನನ್ನ ಹೇಳಿಕೆ ನೀಡಿರುತ್ತೇನೆ - ಎಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆಯನ್ನು ಓದಿ ಹೇಳಿದಾಗ ನಿರಾಕರಿಸಿದ ಕಾರಣ, ಸದರಿ ಹೇಳಿಕೆ ಭಾಗವನ್ನು ನಿಪಿ *4* ಎಂದು ಗುರುತಿಸಲಾಯಿತು. *1* ನೇ ಆರೋಪಿ ಕೆಟ್ಟದಾಗಿ ಬೈದು, *2* ನೇ ಆರೋಪಿ ಲಕ್ಷ್ಮಿಯನ್ನು ಸರಿಯಾಗಿ ನೋಡಿಕೊಳ್ಳದೆ ಆಕೆಯ ಅತ್ಮಹತ್ಯೆಗೆ ಪ್ರೇರಣೆ ನೀಡಿದ್ದಾರೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>*ಆರೋಪಿತರ ಪರವಾಗಿ ಪಾಟೀ ಸವಾಲು:-* ಶ್ರೀ ಎಮ್ ಎಸ್ ಪಿ *ವಕೀಲರಿಂದ:-*</u>

*ವಕೀಲರು ಹಾಜರು ಇದ್ದು, ತಮ್ಮ ಪರವಾಗಿ ಪಾಟೀ ಸವಾಲು ಏನೂ ಇಲ್ಲ ಎಂದು ತಿಳಿಸಿರುತ್ತಾರೆ.*

*ಮರು ವಿಚಾರಣೆ:-* ಇಲ್ಲ.

*(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು.)*

*ಓ.ಹೇ.ಕೇ. ಸರಿ ಇದೆ.*

*2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್*
*ನ್ಯಾಯಾಧೀಶರು, ಹಾಸನ.*